ನೋಡಿಕೊಳ್ಳಲಾಗುವುದು.

ಬೆಳಗಾಂ ವಿಭಾಗದ ನಾಡ ಕಛೇರಿಗಳ ಕೆಲಸ ಕಾರ್ಯಗಳು.

1567 (2236) ಶ್ರೀ ಬಿ.ಐ.ಪಾಟೀಲ್ (ಉಚ್ಚಗಾಂವ್)

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಬೆಳಗಾಂ ವಿಭಾಗದಲ್ಲಿ ನಾಡ ಕಛೇರಿಗಳು ಸಾಕಷ್ಟು ಸಿಬ್ಬಂದಿಯೊಂದಿಗೆ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೇ ;

ಆ) ಬೆಂಗಾಂ ವಿಭಾಗದ ನಾಡ ಕಛೇರಿಗಳಲ್ಲಿ ಖಾಲಿ ಇರುವ ಎಲ್ಲಾ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು ;

ಇ) ಈ ಹುದ್ದೆಗಳನ್ನು ತುಂಬದೇ ಇರಲು ಕಾರಣಗಳೇನು ;

ಈ) ಬೆಳಗಾಂ ವಿಭಾಗದ ನಾಡ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸರ್ಕಾರವು ಕೂಡಲೇ ತುಂಬುವುದೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು)-

ಅ) ಹೌದು.

ಆ) ಒಟ್ಟು 183 ಹುದ್ದೆಗಳು.

ಇ) ನಾಡ ಕಛೇರಿಗಳನ್ನು ರದ್ದುಪಡಿಸುವ, ಮುಂದುವರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಈ ಹುದ್ದೆಗಳನ್ನು ತುಂಬಿರುವುದಿಲ್ಲ.

ಈ) 'ಇ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದಾವಣಗೆರೆ ನಗರಕ್ಕೆ ಹಾಲು ಪೂರೈಕೆಗೆ ಯೋಜನೆ

1568 (2244) ಶ್ರೀ ವೈ.ಎಂ.ವೀರಣ್ಣ (ದಾವಣಗೆರೆ)

ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆಗೆ ವ್ಯವಸ್ಥೆಗಾಗಿ ನಾಲ್ಕೂವರೆ ಕೋಟಿ ರೂ.ವೆಚ್ಚದ ರಾಷ್ಟ್ರೀಯ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ನೆರವಿನ ದಿನವಹಿ 30,000 ಲೀಟರ್ ಹಾಲು ಸಂಗ್ರಹ ಸಾಮರ್ಥ್ಯದ ಪೂರ್ಣ ಪ್ರಮಾಣದ ಹಾಲಿನ ಡೈರಿ ಯೋಜನೆಯೊಂದನ್ನು ಹಿಂದಿನ ಜನತಾ ಸರ್ಕಾರದ ಅವಧಿಯಲ್ಲಿ ಮಂಜೂರು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹೊಸ ಸರ್ಕಾರದವರು ಈ ಬಗ್ಗೆ ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು ; ಹಾಗಿದ್ದಲ್ಲಿ ಇದರ ವಾಸ್ತವಾಂಶವೇನು ;

ಇ) ಒಂದು ವೇಳೆ ಹಿಂದಿನ ಯೋಜನೆ ನಿಲುಗಡೆ ಯಾಗಿದ್ದರೆ ಪುನಶ್ಚೇತನ ನೀಡುವ ಕ್ರಮ ಕೈಗೊಳ್ಳಲಾಗುವುದೇ ;

ಈ) ಹಿಂದಿನ ಯೋಜನೆ ಇಲ್ಲದಿದ್ದರೂ ನಗರದ ನಾಗರೀಕರ ಹಿತದೃಷ್ಟಿಯಿಂದ ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಕ್ರಮ ಕೈಗೊಳ್ಳುತ್ತದೆಯೇ ;

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ, ಪಶುವೈದ್ಯ ಸೇವೆ ಸಚಿವರು)-

ಅ) ಇಲ್ಲಾ

ಆ) ಉದ್ಭವಿಸುವಿದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕಾ ಇಲಾಖೆಯ ಜಮೀನಿನ ಬಗ್ಗೆ.

1569 (2251) ಶ್ರೀ ಎ. ರುಕ್ಕಯ್ಯ ಪೂಜಾರಿ(ವಿಟ್ಲ):-

ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ಬಂಟ್ವಾಳ ತಾಲ್ಲೂಕಿನ ತುಂಬೆ ಎಂಬಲ್ಲಿ ತೋಟಗಾರಿಕೆ ಇಲಾಖೆಯು ಸ್ವಾಧೀನ ಪಡಿಸಿಕೊಂಡ ಜಮೀನು ಎಷ್ಟು;

ಆ) ಈ ಜಮೀನಲ್ಲಿ 1991-92ನೇ ವರ್ಷದಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಎಷ್ಟೆಷ್ಟು ಜಮೀನುಗಳಲ್ಲಿ ಬೆಳೆಸಿದ್ದಾರೆ ;

ಇ) ಅಲ್ಲಿ ಬೆಳೆಸತಕ್ಕ ಬೆಳೆಗಳಿಗೆ ನೀರಿನ ಸಮಸ್ಯೆ ಇದೆಯೆ, ಇದ್ದಲ್ಲಿ ಪರಿಹಾರವೇನು ;

ಈ) ಈ ತೋಟಗಾರಿಕೆ ಇಲಾಖೆಯ ಜಮೀನನ್ನು ಬೇರೆ ಉದ್ದೇಶಕ್ಕಾಗಿ ವರ್ಗಾಯಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ ;

ಉ) ಕರ್ನಾಟಕ ಪವರ್ ಕಾರ್ಪೊರೇಷನ್‌ರವರು ವಸತಿ ಇತ್ಯಾದಿ ಉದ್ದೇಶಕ್ಕಾಗಿ ಈ ಜಮೀನನ್ನು ಸ್ವಾಧೀನಪಡಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)-

ಅ) 26 ಎಕರೆ 72 ಸೆಂಟ್ಸ್.

ಆ) ಒಟ್ಟು 20 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆದಿರುತ್ತಾರೆ. ವಿವರ ಕೆಳಕಂಡಂತಿದೆ:

(1)	ಬೆಂಡೆ	:	6 ಎಕರೆ
(2)	ಅಲಸಂದೆ	:	6 ಎಕರೆ
(3)	ಕುಂಬಳಕಾಯಿ	:	3 ಎಕರೆ
(4)	ಮೆಣಸಿನಕಾಯಿ	:	2 ಎಕರೆ
(5)	ಸೊಪ್ಪುಜಾತಿ	:	1 ಎಕರೆ
(6)	ಬಾಳೆ	:	1/2 ಎಕರೆ
(7)	ಅಲಂಕಾರಿಕ ಗಿಡ ಹಾಗು ಇತರೆ ಸಸಿ	:	1/2 ಎಕರೆ
(8)	ತೆಂಗು ಸಸಿ ಉತ್ಪಾದನೆ	:	1 ಎಕರೆ

ಇ) ನೀರಿನ ಸಮಸ್ಯೆ ಇದೆ. ಹೊಸದಾಗಿ ಒಂದು ಕೊಳವೆ ಬಾವಿ ತೆಗೆದಿದ್ದು 6000 ಗ್ಯಾಲನ್ ನೀರು ಬಂದಿದೆ. ಇದಲ್ಲದೆ ಇನ್ನೂ 2 ತೆರೆದ ಬಾವಿ ತೆಗೆಯವ ಕೆಲಸ ನಡೆಯುತ್ತಿದೆ.

ಈ) ಇಲ್ಲ.

ಉ) ಇಲ್ಲ.

ಬೈಲಹೊಂಗಲದ ಶ್ರೀ ವೀರಭದ್ರೇಶ್ವರ ಗುಡಿಯ ಹತ್ತಿರ ಹೂದೋಟ ಮಾಡುವುದು

1572 (2253) ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ)

ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-